ಪಿ.ಡಬ್ಲ್ಯೂ .1

**<u>ದಿನಾಂಕಃ 19.08.2025ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಪಾಟೀ ಸವಾಲುಃ ಶ್ರೀ. ಎನ್.ಕೆ. ಆರೋಪಿ ಪರ ವಕೀಲರಿಂದ</u>**

ನಾನು ಬಿ.ಎ. ಪದವೀಧರ. ನನಗೆ ಕನ್ನಡ ಮತ್ತು ಆಂಗ್ಲ ಭಾಷೆ ಓದಲು ಮತ್ತು ಬರೆಯಲು ಬರುತ್ತದೆ. ನಾನು ಟ್ರಾನ್ಸ್ ಪೋರ್ಟ್ ಬ್ಯುಸಿನೆಸ್ ಮಾಡುತ್ತೇನೆ. ನಾನು ಬಡ್ಡಿ ವ್ಯವಹಾರ ಮಾಡುವುದಿಲ್ಲ, ಸಣ್ಣಪುಟ್ಟ ಮೊತ್ತವನ್ನು ನೀಡಿ ಜನರಿಗೆ ಸಹಾಯ ಮಾಡುತ್ತೇನೆ. ಆರೋಪಿ ನನಗೆ ಕಳೆದ 3-4 ವರ್ಷಗಳಿಂದ ಪರಿಚಯ ಇರುತ್ತಾರೆ. ಸಿಸಿ ನಂ. 166/2025ರ ಆರೋಪಿಯಾದ ಪ್ರಕಾಶ್ ರವರ ಅತ್ತೆ ಈ ಪ್ರಕರಣದ ಆರೋಪಿಯಾಗಿರುತ್ತಾರೆ. ಆರೋಪಿ ಹಾಲಿನ ವ್ಯಾಪಾರ ಮಾಡುತ್ತಾರೆ. ಅವರು ಯಾವುದೇ ಹಾಲಿನ ವ್ಯಾಪಾರ ಮಾಡುವುದಿಲ್ಲ, ಅವರು ಗೃಹಿಣಿ ಎಂದರೆ ಸರಿಯಲ್ಲ. ಹಾಲಿನ ವ್ಯಾಪಾರ ಪ್ರಕಾಶ್ ರವರು ಮಾಡುತ್ತಿದ್ದು, ಅವರ ಹೆಸರಿನಲ್ಲಿ ಲೈಸೆನ್ಸ್ ಇರುತ್ತದೆ ಎಂದರೆ ಸಾಕ್ಷಿದಾರರು ಈ ಪ್ರಕರಣದ ಆರೋಪಿ ಅಂಗಡಿಯನ್ನು ನೋಡಿಕೊಳ್ಳುತ್ತಿದ್ದರು ಎಂದು ಹೇಳುತ್ತಾರೆ. ನಾನು ಆರೋಪಿಗೆ ದಿನಾಂಕ 10.06.2024ರಂದು 24.40 ಲಕ್ಷ ರೂ.ಗಳನ್ನು ನಗದು ರೂಪದಲ್ಲಿ ಕೊಟ್ಟಿರುತ್ತೇನೆ. ನಾನು ಆರೋಪಿಗೆ ಸದರಿ ಮೊತ್ತವನ್ನು ಅವರ ಮನೆಯಲ್ಲೇ ಕೊಟ್ಟಿರುತ್ತೇನೆ. ನಾನು ಸದರಿ ಮೊತ್ತದ ಭದ್ರತೆಗಾಗಿ ಆರೋಪಿಯಿಂದ ಚೆಕ್ಕನ್ನು ಪಡೆದುಕೊಂಡಿರುತ್ತೇನೆ. ಚೆಕ್ಕನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಯನ್ನು ಪಡೆದುಕೊಂಡಿಲ್ಲ. ಬೇರೆ ದಾಖಲೆಯನ್ನು ಪಡೆದುಕೊಳ್ಳಲು ಪಡೆದುಕೊಳ್ಳಲು ತೊಂದರೆ ಇರಲಿಲ್ಲವೆಂದರೆ ಸರಿ. ಚೆಕ್ಕನ್ನು ಆರೋಪಿಯೇ ಬರೆದು ಕೊಟ್ಟಿದ್ದರು. ಚೆಕ್ಕಿನಲ್ಲಿ ಸಹಿಯ ಬರವಣಿಗೆ ಮತ್ತು ಬೇರೆ ಬರವಣಿಗೆಯಲ್ಲಿ ವ್ಯತ್ಯಾಸ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ನನ್ನ ಬಳಿ 24.40 ಲಕ್ಷ ರೂ.ಗಳನ್ನು ಯಾವತ್ತೂ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಸದರಿ ದಿನದಂದು ನನ್ನ ಬಳಿ ಅಷ್ಟೊಂದು ಹಣ ಇರಲಿಲ್ಲವೆಂದರೆ ಸರಿಯಲ್ಲ. ನನ್ನ ಬ್ಯಾಂಕ್ ಖಾತೆಯಲ್ಲೂ ಕೂಡ ಅಷ್ಟೊಂದು ಹಣ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿ 24.40 ಲಕ್ಷ ಹಣವನ್ನು ಸೆಪ್ಟಂಬರ್ 2024ರಲ್ಲಿ ಕೇಳಿದ್ದರು. ಆರೋಪಿ ಗೃಹಿಣಿಯಾಗಿದ್ದು, ಅವರಿಗೆ ಅಷ್ಟೊಂದು ಹಣ ಬೇಕಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ.10 ಬ್ಯಾಂಕ್ ಸ್ಟೇಟ್ ಮೆಂಟ್ನಲ್ಲಿ ನಾನು ಅಷ್ಟೊಂದು ಹಣ ವಿತ್ ಡ್ರಾ ಮಾಡಿದ ಬಗ್ಗೆ ಎಂಟ್ರಿ ಇರುವುದಿಲ್ಲವೆಂದರೆ ಸಾಕ್ಷಿದಾರರು ನಾನು ಒಮ್ಮೇಲೆ ಅಷ್ಟೊಂದು ಹಣ ವಿತ್ ಡ್ರಾ ಮಾಡಿಲ್ಲವೆಂದು ಹೇಳುತ್ತಾರೆ. ನಾನು ಬ್ಯಾಂಕಿನಿಂದ ಹಣವನ್ನು ಮನಯಲ್ಲಿ ಇಟ್ಟುಕೊಳ್ಳಲು ವಿತ್ ಡ್ರಾ ಮಾಡಿರುತ್ತೇನೆ. ಈ ವಿಷಯವನ್ನು ನನ್ನ ಆದಾಯ ತೆರಿಗೆ ಫಾರಂ ನಲ್ಲಿ ನಮೂದು ಮಾಡಿಲ್ಲ. ನನ್ನ ದಿನನಿತ್ಯದ ಖರ್ಚಿಗಾಗಿ ವಿತ್ ಡ್ರಾ ಮಾಡಿದ ಹಣವನ್ನು ಆರೋಪಿಗೆ ಕೊಟ್ಟಿದ್ದೇನೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಆರೋಪಿಗೆ 24.40 ಲಕ್ಷ

ರೂ.ಗಳನ್ನು ನಗದು ರೂಪದಲ್ಲಿ ಕೊಟ್ಟಿರುವ ವಿಚಾರವನ್ನು ನನ್ನ ಆದಾಯ ತೆರಿಗೆ ಫಾರಂ ನಲ್ಲಿ ತಿಳಿಸಲು ತೊಂದರೆ ಇರಲಿಲ್ಲವೆಂದರೆ ಸರಿ. ಜುಲೈ 2023ರಲ್ಲಿ ಆರೋಪಿ ನನ್ನ ಬಳಿ 1.27 ಲಕ್ಷ ರೂ.ಗಳನ್ನು ಸಾಲವಾಗಿ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿಯಿಂದ ಖಾಲಿ ಚೆಕ್ಕುಗಳನ್ನು ಮತ್ತು ಬಾಂಡುಗಳನ್ನು, ಡಿಮ್ಯಾಂಡ್ ಡ್ರಾಫ್ಟ ನ್ನು ಪಡೆದುಕೊಂಡಿರುತ್ತೇನೆಂದರೆ ಸರಿಯಲ್ಲ. ಡಿಸೆಂಬರ್ 2023ರಲ್ಲಿ ತಾನು ಪಡೆದುಕೊಂಡು ಸಂಪೂರ್ಣ ಸಾಲವನ್ನು ಮರುಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಲ ಮರುಪಾವತಿ ಮಾಡಿದ ನಂತರ ನಾನು ಆರೋಪಿಯು ಕೊಟ್ಟಂತಹ ಚೆಕ್ಕನ್ನು ದುರುಪಯೋಗ ಪಡಿಸಿಕೊಂಡು ಈ ಸುಳ್ಳು ಕೇಸನ್ನು ದಾಖಲು ಮಾಡಿದ್ದೇನೆಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಕೇಸ್ ಹಾಕಿದರೆ ಅವರು ಪ್ರಕಾಶನ ಮೇಲೆ ಒತ್ತಡ ಹೇರುತ್ತಾರೆಂದು ನಾನು ಆರೋಪಿಯ ವಿರುದ್ಧ ಈ ಸುಳ್ಳು ಕೇಸನ್ನು ಮಾಡಿದ್ದೇನೆಂದರೆ ಸರಿಯಲ್ಲ. ಆರೋಪಿ ಚೆಕ್ಕಿನ ಮೊತ್ತವನ್ನು ಕೊಡಲು ಬಾದ್ಯಸ್ಥರಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**(ಓ. ಹೇ. ಕೇ. ಸ)**

**(ಎನ್ ವೈ ರಾವ್)**
**36ನೇ ಎ.ಸಿ.ಜೆ.ಎಂ.,**
**ಬೆಂಗಳೂರು**